ತಲುಪಬೇಕಾದ ಹಲವು ನೋಟುಗಳ ರಾಶಿಯಿದೆ. ಕಾಗದದ ಹಾಗೆ. ಪ್ರೇಮ ಪತ್ರದ ಹಾಗೆ.

ಇವಳು ಬಾಕಿ ಮೊತ್ತ ಚುಕ್ತಾ ಮಾಡುವುದು ಗಂಡನ ಪೆನ್ಶನ್ ಬಂದಾಗ, ಇವಳು ಹೆಣೆದ ಬುಟ್ಟಿಗಳು ಮಾರಾಟವಾದಾಗ. ಒಂದು ಮುದಿ ಹಕ್ಕಿಗೆ ಮಿಕ ಹತ್ತಿರ ಬರುವಂತೆ ಹಣ ಬರುವುದನ್ನು ಇವಳು ಕಾಯುತ್ತಾಳೆ. ಮೊದಲಾದರೆ ಪೋಸ್ಟ್ ಆಫೀಸಿಗೆ ಹೋಗಿ ಸರತಿ ಸಾಲಿನಲ್ಲಿ ನಿಂತು, ಸಹಿ ಮಾಡಿ ಹಣ ತೆಗೆದುಕೊಂಡು ಬರಬೇಕಿತ್ತು. ಈಗ ಹಾಗಲ್ಲ, ಅಕೌಂಟಿಗೆ ಬಂದು ಬೀಳುತ್ತದೆ. ಇವಳ ಚಂದದ ಸಹಿಯೂ ನೋಡುವ ಭಾಗ್ಯ ಸಹ ಹೋಯಿತಲ್ಲ ಎಂದು ಪೋಸ್ಟ್ ಮ್ಯಾನ್ ಬೇಜಾರು ಮಾಡಿಕೊಳ್ಳುತ್ತಾನೆ. ಪೆನ್ಶನ್ ಹಣ ಬಂದ ಕೂಡಲೇ ಮಾವಿನ ಕಾಯಿಯನ್ನು ಒಂದೇ ಏಟಿಗೆ ಕೈಯಿಂದ ಜಜ್ಜಿದ ಹಾಗೆ ನಾಲ್ಕೈದು ಕಡೆ ಹಂಚಿಹೋಗುತ್ತದೆ.

ಬೇಕರಿಯಿಂದ ನಡೆದು ಹೋಗುತ್ತಾಳೆ. ಬೀದಿ ದೀಪವೊಂದರ ಕಂಬದ ಎಲೆಕ್ಟ್ರಿಕ್ ಕೇಬಲಿನ ಮೇಲೆ ಇಪ್ಪತ್ತೆರಡು ದೇಸಿ ಪಾರಿವಾಳಗಳು ಕೂತಿವೆ. ಇವಳ ಕಣ್ಣು ಒಮ್ಮೆ ಪಾರಿವಾಳಗಳ ಮೇಲೆ ಇನ್ನೊಮ್ಮೆ ರಸ್ತೆಯಲ್ಲಿ ಬಿದ್ದಿರುವ ಪ್ಲಾಸ್ಟಿಕು ಬಾಟಲುಗಳ ಮೇಲೆ ಹಾಯುತ್ತದೆ. ಗಾಳಿಯು ಬೀಸಿದಂತೆ ಮೆಲ್ಲಗೆ ಕೇಬಲ್ ತೂಗುತಿದೆ. ಅದರ ಮೇಲೆ ಕೂತ ಪಾರಿವಾಳಗಳು ಸಹ. ಬಸ್ಸು, ರಿಕ್ಷಾ, ಬೈಕುಗಳ ಹಾರ್ನ್‌ಗಳ ಸದ್ದಿಗೆ ಇವು ಬೆಚ್ಚುತ್ತಿಲ್ಲ. ರೂಢಿಯಾಗಿ ಹೋಗಿದೆ ಹಕ್ಕಿಗಳಿಗೆ ಈ ವಾಹನಗಳ ಅರಚಾಟ. ಇವು ಬೇಕೆಂದಾಗ ಹಾರುತ್ತವೆ, ಆಕಳಿಸುತ್ತವೆ. ಮತ್ತಿವು ಈಗ ಹಾರಿದವು. ಕಣ್ಣರಳಿಸಿ ನೋಡಿದಳು ಇವಳು ಹಕ್ಕಿಗಳು ರೆಕ್ಕೆ ಬಿಚ್ಚಿ ಪುರ್ರೆಂದು ಹಾರಿದ್ದನ್ನು. ಉಸಿರು ತುಂಬಿದ ಜೀವಂತ ಬಲೂನುಗಳು ಹಾರಿದಂತೆ. 'ಬೆಳಿಗ್ಗೆಯಿಂದ ಸಂಜೆಯ ತನಕ ಕಿವಿ ಹಾಳಾಗುವಂತೆ ಹಾರ್ನ್ ಬಾರಿಸಿದ ವಾಹನಗಳು ರಾತ್ರಿಗೆ ನಾಪತ್ತೆ, ಪ್ರತಿ ರಸ್ತೆಗಳು ಗಪ್ಚ್ ಎನ್ನುವಂತಿರುವುದನ್ನು ಈ ಹಕ್ಕಿಗಳು ಹೇಗೆ ಸಹಿಸಿಕೊಳ್ಳುತ್ತವೆ, ಒಂಟಿಯಾದ ರಸ್ತೆಗಳಲ್ಲಿ ಅನಾಥವಾದ ಹಕ್ಕಿಗಳು ಎಲ್ಲಿಗೆ ಹೋಗುತ್ತವೆ, ನನ್ನ ಹಾಗೆ ಬಾಲ್ಯದಿಂದ ಅಂಗನವಾಡಿಗೆ, ಸ್ಕೂಲಿಗೆ, ಪ್ರೌಢಾವಸ್ಥೆಗೆ, ಅಲ್ಲಿಂದ ಹಾಸ್ಟೆಲ್ಲಿಗೆ, ಕಾಲೇಜಿಗೆ, ಪಿಜಿಗಳಿಗೆ, ಮತ್ತೆ ತವರಿಗೆ, ಮದುವೆ ಮನೆಗೆ, ಗಂಡನ ಬಾಡಿಗೆ ಮನೆಗೆ, ಗಂಡ ಹೋದ ಎಲ್ಲಾ ಕಡೆಗೆ, ಕೊನೆಗೆ ಸ್ವಂತ ಮನೆಗೆ ವಲಸೆ ಹೋಗುತ್ತವೆಯೇ ಹಕ್ಕಿಗಳು' ಎಂದು ಯೋಚಿಸುತ್ತಾ ನಡೆಯುತ್ತಾಳೆ.

ಹೀಗೆ ನಡೆಯುವಾಗ ಅರೆ ಕ್ಷಣ ಪ್ಲಾಸ್ಟಿಕ್ಕು ಬಾಟಲುಗಳನ್ನು ಗುರುತಿಟ್ಟುಕೊಳ್ಳುತ್ತಾಳೆ. ಇವುಗಳನ್ನೆಲ್ಲಾ ವಾಪಾಸು ಬರಬೇಕಾದರೆ ಖಾಲಿ ಚೀಲದಲ್ಲಿ ಹಾಕಿಕೊಂಡು ನಾಳೆ ಅದರಲ್ಲಿ ನೀರು ತುಂಬಿಸಿಕೊಂಡು ಪ್ರತಿ ಮರದ ಬುಡದಲ್ಲಿ ಇಡುತ್ತಾಳೆ. ಬಾಟಲಿಯ ಕೆಳಗೆ ಸೂಜಿಯಿಂದ ಚುಚ್ಚಿದ ಮಾರ್ಕುಗಳಿವೆ. ಅದರ ಮೂಲಕ ನೀರು ಸೋರಿ ಮರಕ್ಕೆ ದಾಹ ನೀಗುತ್ತದೆ ಎಂಬ ಭಾವ ಇವಳದು. ಉಳಿದ ಬಾಟಲಿಗಳನ್ನು ದೊಡ್ಡದೊಂದು ಚೀಲದಲ್ಲಿ ಶೇಖರಿಸಿಡುತ್ತಾಳೆ. ಯಾವ ಕಂಪೆನಿಯ ನೀರಿದು ಎಂದು ನೋಡಿ, 'ನನ್ನ ಬಳಿ ಇಷ್ಟು ಖಾಲಿ ಬಾಟಲಿಗಳಿವೆ ದಯವಿಟ್ಟು ನಿಮ್ಮ ಸಿಬ್ಬಂದಿಗಳನ್ನು ಕಳಿಸಿ ವಿಲೇವಾರಿ ಮಾಡಿಸಿ' ಎಂದು ಅವರಿಗೊಂದು ಮೇಲ್ ಕಳುಹಿಸಿ, ಅವರ ಮರುತ್ತರಕ್ಕಾಗಿ ಕಾಯುತ್ತಾಳೆ. ರಿಪ್ಲೈ ಬಂದರೆ 'ಥ್ಯಾಂಕ್ಯೂ' ಎಂದಷ್ಟೇ ಹೇಳುತ್ತಾಳೆ. 'ನಿಮ್ಮ ಕಾಳಜಿ ಅರ್ಥವಾಯಿತು, ನೀವು ನಮಗೆ ಬಹಳಷ್ಟು ಸಹಾಯ ಮಾಡುತ್ತಿದ್ದೀರಿ, ನಿಮಗೆ ನಾವು ಋಣಿ' ಎಂಬುದನ್ನು ಕಡೆಗಣಿಸುತ್ತಾಳೆ. ಯಾಕೆಂದರೆ ಇವಳಿಗಿದು ಮಾಮೂಲು. ಮೊದಲಾದರೆ ಇಷ್ಟುದ್ದದ ಮೇಲ್ ಕಳಿಸಿ 'ನಿಮ್ಮ ಕಂಪೆನಿಯ ನೀರು ಎಲ್ಲಾ ಕಡೆ ಸಿಗ್ತಿದೆಯಲ್ಲಾ, ಡೆಲಿವರಿ ಮಾಡುವ ಜಾಗದಲ್ಲೊಂದು ಬಾಟಲುಗಳ ಬಿನ್ನುಗಳನ್ನು ಪೂರೈಸುವುದಕ್ಕೆ ನಿಮಗೇನು ದೊಡ್ಡ ರೋಗ, ವಾಟರ್ ಬಾಲ್ ಪರಿಚಯಿಸಬಹುದಲ್ಲವೇ ನೀವು, ನನ್ನ ಬಳಿ ಅದಕ್ಕೊಂದು ಸುಂದರ ಐಡಿಯಾ ಇದೆ, ಇರಲಿ, ನಿಮಗೊಂದು ವಿನಂತಿ, ದಯವಿಟ್ಟು ಮರುಬಳಕೆಯ ತಂತ್ರಜ್ಞಾನ ಆದಷ್ಟು ಬೇಗ ಇಂಪ್ಲೋಸ್ ಮಾಡಿ' ಎಂದು ಖಾರವಾಗಿ ಪ್ರತಿಕ್ರಿಯಿಸುತ್ತಿದ್ದವಳು ಈಗ ಶಾಂತವಾಗಿದ್ದಾಳೆ. ಯಾವುದೇ ಉತ್ತರ ಬರದಿದ್ದಲ್ಲಿ ಬಾಟಲಿಗಳು ಹೊಸದಾಗಿ ಮನೆ ಯಾರು ಕಟ್ಟುತ್ತಿದ್ದಾರೆ ಎಂದು ಗಮನಿಸಿ ಅವರ ಬಳಿ ಇವುಗಳನ್ನೆಲ್ಲಾ ಕ್ರಷ್ ಮಾಡಿಸಿ ಕಾಂಕ್ರಿಟಿಗೆ ಬಳಿಸಿ ಎಂದು ದುಂಬಾಲು ಬೀಳುತ್ತಾಳೆ. ಬೇಸಿಗೆಯಲ್ಲಿ ಎಷ್ಟು ಬಾಟಲಿಗಳಿದ್ದರೂ ಕಡಿಮೆಯೇ ಎಂದು ಹಲುಬುತ್ತಾಳೆ. ನಾಲ್ಕು ದಿನದ ಬಳಿಕ ಮರದ